ಅಧ್ಯಕ್ಷರು: ಮಾನಪ್ಪ ಡಿ. ವಜ್ಜಲ್ ರವರ ಪ್ರಶ್ನೆ ತೋಟಗಾರಿಕಾ ಇಲಾಖೆಯಿಂದ ವರ್ಗಾವಣೆಯಾಗಿದೆ.

214 (2100) ಶ್ರೀ ಕೆ. ವಸಂತ ಬಂಗೇರ (ಬೆಳ್ತಂಗಡಿ)

215 (2432) ಶ್ರೀಮತಿ ಶಾರದಾ ಪೂರ್ಯನಾಯ್ಕ, ಶಿವಮೊಗ್ಗ ಗ್ರಾಮಾಂತರ.

216 (3111) ಶ್ರೀ ಮಾನಪ್ಪ ಡಿ. ವಜ್ಜಲ್ (ಲಿಂಗಸಗೂರು)

217 (2663) ಶ್ರೀ ಮಹೇಶ್ ಎಸ್. ಆರ್. (ಕೃಷ್ಣರಾಜನಗರ)

218 (3068) ಡಾ; ಕೆ. ಸುಧಾಕರ್ (ಚಿಕ್ಕಬಳ್ಳಾಪುರ)

219 (2438) ಶ್ರೀ ವಿನಯ್ ಕುಲಕರ್ಣಿ (ಧಾರವಾಡ)

220 (2645) ಶ್ರೀ ಶ್ರೀನಿವಾಸ್ ಎಸ್. ಆರ್. (ವಾಸು) (ಗುಬ್ಬಿ)

221 (2864) ಶ್ರೀ ಮಂಜುನಾಥಗೌಡ ಕೆ. ಎಸ್. (ಮಾಲೂರು)

ಸಹಕಾರ ಸಂಘ ಹಾಗೂ ಅದರಲ್ಲಿನ ಸದಸ್ಯರ ವಿವರ

224 (1587); ಶ್ರೀ ಜಗದೀಶ ಕುಮಾರ ಆರ್. (ಹೆಬ್ಬಾಳ)

ಅ) ಹೆಬ್ಬಾಳ ವಿಧಾನ ಸಭಾ ಕ್ಷೇತ್ರದ 8 ವಾರ್ಡುಗಳ ವ್ಯಾಪ್ತಿಯಲ್ಲಿರುವ ಸಹಕಾರ ಸಂಘಗಳೆಷ್ಟು ಹಾಗೂ ಅವುಗಳ ಸದಸ್ಯರ ಸಂಪೂರ್ಣ ಮಾಹಿತಿಯನ್ನು ಒದಗಿಸುವುದು;

ಆ) ಇಲ್ಲದಿದ್ದ ಪಕ್ಷದಲ್ಲಿ, ಹೊಸದಾಗಿ ಸಹಕಾರ ಸಂಘಗಳನ್ನು ಮಾಡಿ ಸಾರ್ವಜನಿಕರು ಸರ್ಕಾರದ ಯೋಜನೆಗಳನ್ನು ಪಡೆಯಲು ಅನುವು ಮಾಡಲು ಸರ್ಕಾರವು ಬದ್ಧವಾಗಿದೆಯೇ?

ಅನುಬಂಧ – 1

ಕ್ರ. ಸಂ.	ಸಹಕಾರ ಸಂಘಗಳು	ಸದಸ್ಯರು				
		ಒಟ್ಟು	ಪರಿಶಿಷ್ಟ ಜಾತಿ	ಪರಿಶಿಷ್ಟ ಪಂಗಡ	ಮಹಿಳೆಯರು	ವಿಕಲ ಚೇತನರು
1	ಆರ್.ಟಿ.ನಗರ ಮಹಿಳಾ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿ., ಆರ್.ಟಿ.ನಗರ ಅಂಚೆ, ಬೆಂಗಳೂರು	239	6	0	239	0
2	ಮಠದಹಳ್ಳಿ ಮಹಿಳಾ ಪತ್ತಿನ ಸಹಕಾರ ಸಂಘ ನಿ., ಆರ್.ಟಿ.ನಗರ ಅಂಚೆ, ಬೆಂಗಳೂರು	584	19	2	584	2
3	ನೇತ್ರಾವತಿ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿ., ದೇವಸಂದ್ರ, ಬೆಂಗಳೂರು	1109	14	5	371	0
4	ಜಯಚಾಮರಾಜ ಪತ್ತಿನ ಸಹಕಾರ ಸಂಘ ನಿ, ಮಠದಹಳ್ಳಿ, ಬೆಂಗಳೂರು	1312	0	2	289	0
5	ಅರ್ಕಾವತಿ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿ.,	1153	11	0	251	1

	ನಾಗಶೆಟ್ಟಿಹಳ್ಳಿ, ಬೆಂಗಳೂರು					
6	ವಿಮಲ್ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿ., ಗೋಕುಲ, ಬೆಂಗಳೂರು	211	0	0	47	0
7	ಕಂಟ್ರೋಲರೇಟ್ ಆಫ್ ಕ್ವಾಲಿಟಿ ಅಸ್ಯೂರೆನ್ಸ್ ಎಲೆಕ್ಟ್ರಾನಿಕ್ಸ್, ಕ್ಯಾಂಪಸ್ (ಸಿ ಅಂಡ್ ಎಲ್) ಎಂಪ್ಲಾಯಿಸ್ ಕ್ರೆಡಿಟ್ ಸಹಕಾರ ಸಂಘ ನಿ., ಜಯಚಾಮರಾಜ ನಗರ, ಬೆಂಗಳೂರು	1514	47	5	386	3
8	ಕರ್ನಾಟಕ ಸ್ಟೇಟ್ ಆಗ್ರೋ ಕಾರನ್ ಪ್ರಾಡಕ್ಟ್ ನೌಕರರ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿ., ಹೆಬ್ಬಾಳ ಬೆಂಗಳೂರು–22	38	0	0	0	0
9	ಸ್ಪೇಸ್ ಎಂಪ್ಲಾಯಿಸ್ ಕೋ–ಆಪರೇಟಿವ್ ಸೊಸೈಟಿ ಲಿ. ನ್ಯೂ ಬಿ.ಇ.ಎಲ್.ರೋಡ್, ಬೆಂಗಳೂರು	513	12	5	76	2
10	ಅಗ್ರಿಕಲ್ಚರ್ ಕಾಲೇಜ್ ಎಂಪ್ಲಾಯಿಸ್ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿ., ಹೆಬ್ಬಾಳ ಬೆಂಗಳೂರು	623	17	3	128	4

11	ಹೆಚ್.ಕ್ಯೂ.ಟಿ.ಸಿ. ಸಿವಿಲಿಯನ್ಸ್ ಕ್ರೆಡಿಟ್ ಸಹಕಾರ ಸಂಘ ನಿ., ಜೆ.ಸಿ.ನಗರ, ಬೆಂಗಳೂರು	219	15	6	29	2
12	ಹೆಚ್.ಎಂ.ಟಿ. ಕೇಂದ್ರ ಕಛೇರಿ ನೌಕರರ ಪತ್ತಿನ ಸಹಕಾರ ಸಂಘ ನಿ.	176	11	4	17	1
13	ಶ್ರೀ ಚಾಮುಂಡೇಶ್ವರಿ ರೇಷನ್‌ಕಾರ್ಡ ಹೋಲ್ಡರ್ಸ್ ಬಳಕೆದಾರರ ಸಹಕಾರ ಸಂಘ ನಿ., ಆರ್.ಟಿ.ನಗರ ಅಂಚೆ ಬೆಂಗಳೂರು	364	19	0	98	3
14	ಮಯ್ಯೂರಿನಗರ ರೇಷನ್ ಕಾರ್ಡ ಹೋಲ್ಡರ್ಸ್ ಬಳಕೆದಾರರ ಸಹಕಾರ ಸಂಘ ನಿ., ಆರ್.ಟಿ.ನಗರ ಬೆಂಗಳೂರು	610	28	6	189	1
15	ಶ್ರೀ ಮಹೇಶ್ವರಿ ಬಳಕೆದಾರರ ಸಹಕಾರ ಸಂಘ ನಿ., ರಾಜಮಹಲ್ ವಿಲಾಸ್, ಬೆಂಗಳೂರು	391	43	0	79	2
16	ಕನಕ ಗೆಳೆಯರ ಬಳಗ ಬಳಕೆದಾರರ ಸಹಕಾರ ಸಂಘ ನಿ., ಆರ್.ಟಿ.ನಗರ ಅಂಚೆ ಬೆಂಗಳೂರು	501	7	0	147	0

17	ಶ್ರೀ ಮಂಜುನಾಥ ಬಳಕೆದಾರರ ಸಹಕಾರ ಸಂಘ ನಿ., ಗಂಗಾನಗರ, ಬೆಂಗಳೂರು	190	12	0	38	0
18	ಮುನಿರೆಡ್ಡಿಪಾಳ್ಯ ಬಳಕೆದಾರರ ಸಹಕಾರ ಸಂಘ ನಿ., ಬೆಂಗಳೂರು	314	12	5	77	2
19	ಮುಬಾರಕ್‌ನಗರ ಬಳಕೆದಾರರ ಸಹಕಾರ ಸಂಘ ನಿ. ಜೆ.ಸಿ.ನಗರ, ಬೆಂಗಳೂರು	196	7	7	43	0
20	ಶ್ರೀ ಮಹೇಶ್ವರಿ ಬಳಕೆದಾರರ ಸಹಕಾರ ಸಂಘ ನಿ., ಜೆ. ಸಿ. ನಗರ. ಬೆಂಗಳೂರು	216	1	4	138	0
21	ಮಠದಹಳ್ಳಿ ಬಳಕೆದಾರರ ಸಹಕಾರ ಸಂಘ ನಿ., ಮಠದಹಳ್ಳಿ, ಬೆಂಗಳೂರು	154	12	0	19	0
22	ಜನತಾ ಬಳಕೆದಾರರ ಸಹಕಾರ ಸಂಘ ನಿ., ನಂ.6, 5ನೇ ಮೇನ, ಕಾರ್ಪೊರೇಷನ್ ಕಾಂಪ್ಲೆಕ್ಸ್, ಗಂಗೇನಹಳ್ಳಿ, ಬಡಾವಣೆ, ಬೆಂಗಳೂರು	210	8	0	26	1
23	ಶ್ರೀರಾಘವೆಂದ್ರ ಬಳಕೆದಾರರ ಸಹಕಾರ ಸಂಘ ನಿ.,	217	2	7	95	0

	ಹೆಣ್ಣೂರು, ಬೆಂಗಳೂರು					
24	ನಂದಿ ಬಳಕೆದಾರರ ಸಹಕಾರ ಸಂಘ ನಿ., ವಿಶ್ವನಾಥ ನಾಗೇನಹಳ್ಳಿ, ಆರ್.ಟಿ.ನಗರ. ಅಂಚೆ ಬೆಂಗಳೂರು	318	11	0	134	3
	ಒಟ್ಟು (ಬಳಕೆದಾರರ ಸಹಕಾರ ಸಂಘಗಳು)	3681	162	29	1083	12
25	ಪ್ರಶಾಂತ್ ಗೃಹ ನಿರ್ಮಾಣ ಸಹಕಾರ ಸಂಘ ನಿ., ಸಂಜಯನಗರ, ಬೆಂಗಳೂರು	585	14	3	141	0
26	ಬಿ. ಎಸ್. ಎನ್. ಎಲ್, ಸೆಂಟ್ರಲ್ ಗೌರ್ನಮೆಂಟ್ ಆಂಡ್ ರಿಟೈರ್ಡ್ ಎಂಪ್ಲಾಯಿಸ್ ಹೌಸ್ ಬಿಲ್ಡಿಂಗ್ ಕೋ–ಆಪರೇಟಿವ್ ಸೊಸೈಟಿ ಲಿ., ಆರ್.ಟಿ.ನಗರ, ಅಂಚೆ, ಬೆಂಗಳೂರು	1120	47	14	176	0
27	ಕೆಂಪೇಗೌಡ ಗ್ರಾಮಾಂತರ ಗೃಹ ನಿರ್ಮಾಣ ಸಹಕಾರ ಸಂಘ ನಿ., ಬಿನ್ನಿ ಗಾರ್ಮೆಂಟ್ಸ್ ಫ್ಯಾಕ್ಟರಿ ಹಿಂಭಾಗ, ಬೆಂಗಳೂರು	306	9	3	89	0
28	ಸಿವಿಲ್ ಏವಿಯೇಷನ್ ಆಂಡ್ ಮೆಟಿರಾಲಿಜಕಲ್	365	39	9	94	3

	ಡಿಪಾರ್ಟ್‌ಮೆಂಟ್ ಎಂಪ್ಲಾಯಿಸ್ ಹೌಸ್ ಬಿಲ್ಡಿಂಗ್ ಕೋ–ಆಪರೇಟಿವ್ ಸೊಸೈಟಿ ಲಿ., ಗಂಗಾನಗರ, ಬೆಂಗಳೂರು					
29	ಕರ್ನಾಟಕ ರಾಜ್ಯ ಪದವೀದರರ ಗೃಹ ನಿರ್ಮಾಣ ಸಹಕಾರ ಸಂಘ ನಿ., ನಂ. 9. 2ನೇ ಮಹಡಿ, ಬಳ್ಳಾರಿ ರಸ್ತೆ, ಹೆಬ್ಬಾಳ, ಬೆಂಗಳೂರು	1106	14	5	210	0
30	ಯು.ಎ.ಎಸ್.ನೌಕರರ ಗೃಹ ನಿರ್ಮಾಣ ಸಹಕಾರ ಸಂಘ ನಿ., ಹೆಬ್ಬಾಳ, ಬೆಂಗಳೂರು	1695	74	16	214	2
31	ಎನ್.ಟಿ.ಐ. ಎಂಪ್ಲಾಯಿಸ್ ಗೃಹ ನಿರ್ಮಾಣ ಸಹಕಾರ ಸಂಘ ನಿ., ನಂ 51, 9ನೇ ಮೇನ್, 6ನೇ ಕ್ರಾಸ್, ಪ್ಯಾಲೇಸ್ ಅರೈಡ್ ಅಪಾರ್ಟಮೆಂಟ್, ಆರ್.ಎಂ.ಇ. ಬಡಾವಣೆ, ಬೆಂಗಳೂರು	3520	135	19	536	0
32	ತಿರುಮಲ, ಗೃಹ ನಿರ್ಮಾಣ ಸಹಕಾರ ಸಂಘ ನಿ. ನಂ. 39/1 ವಿನಾಯಕ ಬಡಾವಣೆ, ಕೆ.ಎಚ್.ಬಿ. ಮುಖ್ಯರಸ್ತೆ, (ಭಾರತ ತರಬೇತಿ ಶಾಲೆ ಎದುರು)	348	19	6	79	0

	ಆರ್.ಟಿ.ನಗರ. ಬೆಂಗಳೂರು–560032					
33	(10) ರಾಜಮಹಲ್ ಹ್ಯಾಪಿ ಹೋಂ ಫ್ಲಾಟ್ ಓನರ್ಸ್ ಕೋ–ಆಪ ರೇಟಿವ್ ಸೊಸೈಟಿ ಲಿ., ನಂ. 71, 8ನೇ ಕ್ರಾಸ್, ರಾಜಮಹಲ್ ವಿಲಾಸ್ ಬಡಾವಣೆ, ಬೆಂಗಳೂರು	16	0	0	6	0
34	ಮಾರ್ಗದರ್ಶಿ ಹೌಸಿಂಗ್ ಕೋ–ಆಪರೇಟಿವ್ ಸೊಸೈಟಿ ಲಿ., ಸಂಜಯನಗರ, ಬೆಂಗಳೂರು	105	3	0	21	0
35	ಶ್ರೀ ಗಾಯತ್ರಿ ಗೃಹ ನಿರ್ಮಾಣ ಸಹಕಾರ ಸಂಘ ನಿ., ನಂ. 64 ಮತ್ತು 48, 8ನೇ ಅಡ್ಡರಸ್ತೆ, ಎಂ.ಎಸ್.ಆರ. ನಗರ ಬೆಂಗಳೂರು	675	19	5	78	0
36	ಸೆಂಟ್ರಲ್ ಗೌರ್ನಮೆಂಟ್ ಟೆಲಿಕಾಂ ಎಂಪ್ಲಾಯಿಸ್ & ರಿಟೈರ್ಡ್ ಎಂಪ್ಲಾಯಿಸ್ ಹೌಸಿಂಗ್ ಕೋ–ಆಪರೇಟಿವ್ ಸೊಸೈಟಿ ಲಿ., ಗಂಗಾನಗರ, ಬೆಂಗಳೂರು	464	11	0	114	0
	ಒಟ್ಟು (ಗೃಹ ನಿರ್ಮಾಣ ಸಹಕಾರ ಸಂಘಗಳು)	10305	384	80	1758	5

37	ಕರ್ನಾಟಕ ರಾಜ್ಯ ಸಂಘಟಿತ ಅಸಂಘಟಿತ ಕೆಲಸಗಾರರ ವಿವಿಧೋದ್ದೇಶ ಸಹಕಾರ ಸಂಘ ನಿ., ಹೆಚ್.ಎಂ.ಟಿ. ಲೇಔಟ್ ಬಡಾವಣೆ, ಆರ್.ಟಿ.ನಗರ. ಬೆಂಗಳೂರು	660	139	43	134	6
38	ಸುಮಗಳಿ ಮಹಿಳಾ ವಿವಿದೋದ್ದೇಶ ಸಹಕಾರ ಸಂಘ ನಿ., ಚೋಳನಾಯಕನಹಳ್ಳಿ, ಆರ್.ಟಿ.ನಗರ. ಅಂಚೆ, ಬೆಂಗಳೂರು	245	9	2	245	0
39	ಶ್ರೀ ಮನೋಜವಂ ಮಹಿಳಾ ವಿವಿದೋದ್ದೇಶ ಸಹಕಾರ ಸಂಘ ನಿ., ನಾಗಶೆಟ್ಟಿಹಳ್ಳಿ, ಸಂಜಯನಗರ, ಅಂಚೆ, ಬೆಂಗಳೂರು	248	13	4	249	1
	ಒಟ್ಟು (ವಿವಿದೋದ್ದೇಶ ಸಹಕಾರ ಸಂಘಗಳು)	1153	161	49	617	7
40	ಉದಯ ಕರ್ನಾಟಕ ಎಸ್‌ಸಿ/ಎಸ್‌ಟಿ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿ., ಗಂಗಾನಗರ, ಬೆಂಗಳೂರು	221	178	43	71	1

41	ಕರ್ನಾಟಕ ಸಾವಯವ ಕೃಷಿ ಉತ್ಪಾದಕರ ಮತ್ತು ಸಂಸ್ಕರಣಗಳ ಮಾರಾಟ ಸಹಕಾರ ಸಂಘ ನಿ., ಭದ್ರಪ್ಪ ಬಡಾವಣೆ, ಬೆಂಗಳೂರು	145	7	2	41	0
42	ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡಗಳ ತೆಂಗಿನ ನಾರಿನ ಮಹಿಳಾ ಸಹಕಾರ ಸಂಘ ನಿ., ನಂ.2ನೇ ಕ್ರಾಸ್, ಮಠದಹಳ್ಳಿ, ಬೆಂಗಳೂರು	221	165	56	202	3
43	ಕಿರಣ್ ಬಳಕೆದಾರರ ಸಹಕಾರ ಸಂಘ ನಿ., ನಂ. 28, 3ನೇ ಅಡ್ಡರಸ್ತೆ, ಛೆರ್‌ಮನ್ ಗುಂಡಪ್ಪ ರಸ್ತೆ, ಬೆಂಗಳೂರು	215	11	3	69	0
44	ಬೆಂಗಳೂರು ಕೋಳಿ ಸಾಕಾಣಿಕದಾರರ (ಹೆಬ್ಬಾಳ ಕೋಳಿ ಸಾಕಾಣಿಕೆದಾರರ) ಸಹಕಾರ ಸಂಘ ನಿ., ಹೆಬ್ಬಾಳ, ಬೆಂಗಳೂರು)	165	13	6	9	0
	ಒಟ್ಟು (ಸಮಾಪನಾ ಸಹಕಾರ ಸಂಘಗಳು)	165	13	6	9	0
	ಒಟ್ಟು ಜುಮ್ಲಾ	**23797**	**1233**	**300**	**6267**	**43**

ಶ್ರೀ ಆರ್. ಜಗದೀಶ್ ಕುಮಾರ್: ಮಾನ್ಯ ಅಧ್ಯಕ್ಷರೆ, ಈ ಪ್ರಶ್ನೆಯನ್ನು ಏಕೆ ಕೇಳಿದ್ದೆ ಎಂದರೆ ಸಹಕಾರ ಸಂಘಗಳಲ್ಲಿರುವ ಸದಸ್ಯರಿಗೆ ನಗರ ಪ್ರದೇಶದಲ್ಲಿ ಆರೋಗ್ಯ ವಿಮಾ ಯೋಜನೆ 1000 ರೂ. ಕಟ್ಟಿದರೆ ಕೊಡುವುದಕ್ಕೆ ಇಲ್ಲಿಗೆ extend ಮಾಡಿರುವುದಾಗಿ ಹೇಳಿದ್ದೀರಿ. ಆದರೆ, ನಗರ ಪ್ರದೇಶಗಳಲ್ಲಿ ಸಹಕಾರ ಸಂಘಗಳು ಬಹಳ ಕಡಿಮೆ ಇರುವುದರಿಂದ ಆರೋಗ್ಯ ವಿಮಾ ಯೋಜನೆ ಎಲ್ಲರಿಗೂ ಸಿಗುವುದಕ್ಕೆ ಬೇರೆ ಏನಾದರೂ ಮಾಗೋಪಾಯ ಇದೆಯೇ ಎಂದು ಮಂತ್ರಿಗಳಲ್ಲಿ ಕೇಳಲಿಚ್ಚಿಸುತ್ತೇನೆ.

ಶ್ರೀ ಹೆಚ್. ಎಸ್. ಮಹದೇವಪ್ರಸಾದ್: ಮಾನ್ಯ ಅಧ್ಯಕ್ಷರೆ, ನಗರ ಯಶಸ್ವಿನಿ ಯೋಜನೆಯನ್ನು ನಾವು ಈ ವರ್ಷದಿಂದ ಜಾರಿಗೆ ತರುತ್ತಿದ್ದೇವೆ. ಸುಮಾರು 70 ಲಕ್ಷ ಸಹಕಾರಿ ಸದಸ್ಯರುಗಳು ಬೆಂಗಳೂರು ಸೇರಿದಂತೆ ಈ ನಗರ ಪ್ರದೇಶಗಳಲ್ಲಿದ್ದಾರೆ. ಹಾಗಾಗಿ ಮುಕ್ತವಾಗಿ ಸಹಕಾರಿ ಸಂಘಗಳನ್ನು ಸ್ಥಾಪನೆ ಮಾಡಿಕೊಳ್ಳುವುದಕ್ಕೆ ನಮ್ಮ ಕಾನೂನಿನಲ್ಲಿ ಅವಕಾಶವಿದೆ. ಯಾವುದಾದರೂ ಯಶಸ್ವಿನಿ ಯೋಜನೆಗೆ ಒಳಪಡಬೇಕೆಂದು ಅಪೇಕ್ಷೆ ಇರುವವರು, ಸುಮಾರು 37 ವಿವಿಧ ಬಗೆಯ ಸಹಕಾರ ಸಂಘಗಳಿವೆ ಹತ್ತಿರದಲ್ಲಿರುವ ಯಾವುದಾದರೊಂದು ಸಹಕಾರಿ ಸಂಘದಲ್ಲಿ ಅವರು ಸದಸ್ಯರಾದರೆ ಮತ್ತೆ ಅರ್ಹತೆಯಿರುವವರಿಗೆ ಸದಸ್ಯತ್ವವನ್ನು ನಿರಾಕರಿಸುವಂತಹ ಅವಕಾಶವಿಲ್ಲ. ಹಾಗಾಗಿ ಸದಸ್ಯತ್ವವನ್ನು ಪಡೆದುಕೊಂಡು, ತಾವು ಹೇಳಿದಂತೆ 1000 ರೂಪಾಯಿಗಳಿಲ್ಲ ನಗರ ಪ್ರದೇಶಕ್ಕೆ 750/– ರೂಪಾಯಿಗಳನ್ನು ನಿಗದಿ ಪಡಿಸಿದ್ದೇವೆ. ಅದರ ಸದುಪಯೋಗವನ್ನು ಪಡೆದುಕೊಳ್ಳಬೇಕೆಂದು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ತಿಳಿಸುವುದಕ್ಕೆ ಬಯಸುತ್ತೇನೆ.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ: ಮಾನ್ಯ ಅಧ್ಯಕ್ಷರೆ, ಮಾನ್ಯ ಸಹಕಾರಿ ಸಚಿವರು ಯಶಸ್ವಿನಿ ಯೋಜನೆಯನ್ನು ನಗರ ಪ್ರದೇಶಗಳಿಗೆ ವಿಸ್ತರಣೆ ಮಾಡಿರುವಂತಹದ್ದು, ಬಹುಶಃ ಬಹಳ ದಿವಸಗಳ ಹಿಂದೆ ಯಶಸ್ವಿನಿ ಯೋಜನೆ ಇಡೀ ರಾಜ್ಯದಲ್ಲಿ ರೈತರಿಗಾಗಿ ರೈತರಿಗೋಸ್ಕರ ಇರಬೇಕೆಂಬ ಆಲೋಚನೆ ಇಟ್ಟುಕೊಂಡು ಅಂದು ಮಾಡಿರುವ ಯೋಜನೆ, ತಾವು ಧಾರಾಳ ಮನಸ್ಸಿನಿಂದ ಅದನ್ನು ಪಟ್ಟಣ ಪ್ರದೇಶಕ್ಕೂ ಕೂಡ ವಿಸ್ತರಣೆ ಮಾಡಿದ್ದೀರಿ. ಅದರ ಬಗ್ಗೆ

ನಾವು ವಿರೋಧ ವ್ಯಕ್ತಪಡಿಸುವುದಕ್ಕೆ ಹೋಗುವುದಿಲ್ಲ. ಏಕೆಂದರೆ ರೈತರಿಗೋಸ್ಕರ ಇರುವಂತಹ ಯಶಸ್ವಿನಿ ಯೋಜನೆಯನ್ನು ಟ್ರಸ್ಟ್ ಮುಖಾಂತರ ಮಾಡಿರುವುದು. ಆದರೆ, ಇವತ್ತು ನಗರ ಪ್ರದೇಶಕ್ಕೆ ಆಗಿರುವಂತಹ ಸಂಧರ್ಭದಲ್ಲಿ ಇದರಲ್ಲಿ ನಾಳೆ ಆ ಟ್ರಸ್ಟ್‌ನಲ್ಲಿ ದುರುಪಯೋಗ ಆಗುವಂತಹ ಸನ್ನಿವೇಶ ಬಹಳಷ್ಟಿದೆ. ಅದಕ್ಕೋಸ್ಕರ ತಾವು ಜಾಗ್ರತೆಯನ್ನು ವಹಿಸಬೇಕು. ಅದರ ಜೊತೆಗೆ ರಾಜ್ಯ ಸರ್ಕಾರದಿಂದ ಬಜೆಟ್‌ನಲ್ಲಿ ಆ ಟ್ರಸ್ಟ್‌ಗೆ ಹೆಚ್ಚಿಗೆ ಹಣ ಕೊಡುವ ಬಗ್ಗೆ ಏನು ಅಲೋಚನೆ ಮಾಡಿದ್ದೀರೆಂಬ ಬಗ್ಗೆ ತಾವು ಹೇಳ ಬೇಕಾಗುತ್ತದೆ.

ಅಧ್ಯಕ್ಷರು: ಈ ಪ್ರಶ್ನೆ ಈಗ ಬರುವುದಿಲ್ಲ. ಅವರು ಹೊಸ ಸಂಘ ಗಳನ್ನು ಪ್ರಾರಂಭ ಮಾಡಿ ಎಂದು ಕೇಳಿದ್ದಾರೆ.

ಶ್ರೀ ಹೆಚ್. ಎಸ್. ಮಹದೇವಪ್ರಸಾದ್: ಇರಲಿ ಬಿಡಿ ಅಧ್ಯಕ್ಷರೆ, ಅವರು ಕೇಳಿರುವುದನ್ನು ಸದನದ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ನಗರ ಯಶಸ್ವಿನಿ ಯೋಜನೆಗೆ ಈ ಬಾರಿ ಬಜೆಟ್‌ನಲ್ಲಿ 10 ಕೋಟಿ ರೂಪಾಯಿಗಳನ್ನು ಮೀಸಲಾಗಿಟ್ಟಿದೆ. ನಾವು ಅದಕ್ಕೆ 1000/– ರೂ. ಪ್ರೀಮಿಯಮ್ ಹಣವನ್ನು ನಿಗದಿಪಡಿಸಿದ್ದ ಕಾರಣ 10 ಕೋಟಿ ರೂಪಾಯಿಗಳನ್ನು ಇಟ್ಟು ಆ ಸದಸ್ಯರ ಪ್ರೀಮಿಯಮ್ ಹಣ ಮತ್ತು ಸರ್ಕಾರದ ಹಣ ಎರಡನ್ನೂ ಕ್ರೋಢೀಕರಿಸಿ over all ಒಂದು ration ತೆಗೆದುಕೊಂಡು 10 ರಿಂದ 12% patients ಅದನ್ನು avail ಮಾಡಬಹುದು ಎಂಬ ನಿರೀಕ್ಷೆ. ಅದರಡಿಯಲ್ಲಿ ಅದನ್ನು ಮಾಡಿದ್ದೇವೆ. ಈಗ 750/– ರೂಪಾಯಿಗಳನ್ನು ಇಳಿಸಿರುವುದರಿಂದ 70 ರಿಂದ 80 ಕೋಟಿ ರೂಪಾಯಿಗಳವರೆಗೆ ಸರ್ಕಾರಕ್ಕೆ ವೆಚ್ಚ ತಗಲುವಂತಹ ಸಂದರ್ಭವಿದೆ.

ಅಧ್ಯಕ್ಷರು: ಸಹಕಾರ ಸಂಘಗಳ ಬೇಡಿಕೆ ಮೇಲೆ ಚರ್ಚೆ ಬಂದಾಗ ಈ ವಿಷಯವನ್ನು ಮಾತನಾಡಿ.

ಶ್ರೀ ಹೆಚ್. ಎಸ್. ಮಹದೇವ ಪ್ರಸಾದ್: ಅದು ಬಂದರೂ ಕೂಡ ಸರ್ಕಾರ ಅದನ್ನು ಕೊಡುವಂತಹ ವ್ಯವಸ್ಥೆಯನ್ನು ಮಾಡುತ್ತದೆ. ಅದರಿಂದ ಯಾವುದೇ ರೀತಿಯ ದುರುಪಯೋಗವಾಗದ ರೀತಿ ನೋಡಿಕೊಳ್ಳುವುದಕ್ಕೆ

ಕ್ರಮವನ್ನು ಕೈಗೊಂಡಿದೆ ಮತ್ತು ಯಶಸ್ವಿನಿ ಟ್ರಸ್ಟನ್ನು ಎಲ್ಲಾ ಸದಸ್ಯರು ಕೂಡ ನಗರ ಯಶಸ್ವಿನಿ ಬಗ್ಗೆ ನಾಲ್ಕಾರು ಸಭೆಗಳನ್ನು ಮಾಡಿ ಒಮ್ಮತದ ಅಭಿ ಪ್ರಾಯದ ಮೇಲೆ ಅದನ್ನು ಜಾರಿಗೊಳಿಸಿದ್ದೇವೆ.

ಅಧ್ಯಕ್ಷರು: ಈಗ held over questions. ಶ್ರೀ ಎಸ್. ಸಿಷ್ಟಮಾದೂ ಗೈರು ಹಾಜರಾಗಿದ್ದರು. ಪಿ. ಆರ್. ಸುಧಾಕರ್‌ಲಾಲ್ ರವರ ಪ್ರಶ್ನೆ.

ತಡೆಹಿಡಿಯಲಾದ ಪ್ರಶ್ನೆಗಳು

ವಿದ್ಯಾರ್ಥಿನಿಲಯಗಳ ಕೊರತೆ

2836; ಸುಧಾಕರಲಾಲ್ ಪಿ. ಆರ್. (ಕೊರಟಗೆರೆ)

ಅ) ಕೊರಟಗೆರೆ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ವಿದ್ಯಾರ್ಥಿ ನಿಲಯಗಳ ಕೊರತೆಯಿಂದಾಗಿ ಗ್ರಾಮೀಣ ಪ್ರದೇಶದ ಬಡ ವಿದ್ಯಾರ್ಥಿಗಳ ವಿದ್ಯಾ ಭ್ಯಾಸಕ್ಕೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿ ದೆಯೇ;

ಆ) ತುಮಕೂರು ಜಿಲ್ಲೆಯಲ್ಲಿ 2013–14ನೆ ಸಾಲಿನಲ್ಲಿ ಹೊಸದಾಗಿ ಮಂಜೂರು ಮಾಡಲು ಬೇಡಿಕೆ ಇರುವ ಮೆಟ್ರಿಕ್ ನಂತರದ ಜಾತಿ ಮತ್ತು ಪರಿಶಿಷ್ಟ ವರ್ಗಗಳ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರ ನಿಲಯಗಳೆಷ್ಟು; (ಪೂರ್ಣ ವಿವರಗಳನ್ನು ನೀಡುವುದು);

ಇ) ಹಾಗಿದ್ದಲ್ಲಿ, ಕೊರಟಗೆರೆ ವಿಧಾನ ಸಭಾ ಕ್ಷೇತ್ರಕ್ಕೆ ಬೇಡಿಕೆ ಇರುವ ವಿದ್ಯಾರ್ಥಿ ನಿಲಯಗಳನ್ನು ಮಂಜೂರು ಮಾಡಲಾಗುವುದೇ; ಹಾಗಾ ದರೆ, ಯಾವಾಗ ಮಂಜೂರು ಮಾಡಲಾಗುವುದು;

ಶ್ರೀ. ಹೆಚ್. ಆಂಜನೇಯ (ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು)

ಅ) ಇಲ್ಲ. ಕೊರಟಗೆರೆ ತಾಲ್ಲೂಕಿನಲ್ಲಿ ಸಮಾಜ ಕಲ್ಯಾಣ ಇಲಾಖೆಯ 03 ಮೆಟ್ರಿಕ್ ಪೂರ್ವ ಹಾಗೂ 02 ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯ